1	2	3
3	O>P>G / Cephalometry	100 00
4	T M J X-rays	100 00
5	Sialograms	100 00
1	DENTAL CONSULTATION CHARGEES AT GOVERNMENT HOSPITALS	NIL
2	TREATMENT CHARGES FOR PATIENTS BELOW POVERTY LINE	NIL

Note for procedures involving constlier dental materials charges can be collected at 50% rates for BPL patients

ಸರ್ಕಾರಿ ಶಾಲೆಯಲ್ಲಿರುವ ಪೂರ್ವ ಪ್ರಾಥಮಿಕ ಶಾಲಾ ಸಹಾಯಕಿಯರ ಹುದ್ದೆ ಖಾಯಂ

105 (538) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಶಾಲೆಗಳಲ್ಲಿರುವ ಪೂರ್ವ ಪ್ರಾಥಮಿಕ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕಿಯರ ಸಂಖ್ಯೆ ಎಷ್ಟು ಇವರಲ್ಲಿ ಎಷ್ಟು ಜನರನ್ನು ರಾಜ್ಯದಲ್ಲಿ ಖಾಯಂಗೊಳಿಸಲಾಗಿದೆ

ಆ) ಈ ಯೋಜನೆ ಈಗ ಸ್ಥಗಿತಗೊಳಿಸಿರುವುದರಿಂದ ಈ ಸಹಾಯಕಿಯರನ್ನು ಸದರಿ ಶಾಲೆಯಲ್ಲಿಯೇ ಮುಂದುವರೆಸಲಾಗುವುದೆ

ಇ) ಈಗ ಹಾಲಿ ಇವರಿಗೆ ನೀಡುತ್ತಿರುವ ಮಾಸಿಕ ಸಂಭಾವನೆ ಎಷ್ಟು ಇದನ್ನು ಹೆಚ್ಚಿಸಲು ಮತ್ತು ಹುದ್ದೆಗಳನ್ನು ಖಾಯಂಗೊಳಿಸಲು ಬೇಡಿಕೆ ಸರ್ಕಾರಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸರ್ಕಾರದ ನಿಲುವೇನು

ಪ್ರೋ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ 2550 ಸಹಾಯಕಿಯರು (ಆಯಾಗಳು) ಸೇವೆ ಸಲ್ಲಿಸುತ್ತಿದ್ದಾರೆ ಇವರ ಸೇವೆಯನ್ನು ಸಕ್ರಮಗೊಳಿಸಲು ನಿಯಮದಲ್ಲಿ ಅವಕಾಶವಿರುವುದಿಲ್ಲ

ಆ) ಪೂರ್ವ ಪ್ರಾಥಮಿಕ ಶಾಲೆಗಳನ್ನು ಮುಚ್ಚಲು ಆದೇಶ ನೀಡಿರುವುದರಿಂದ ಇವರನ್ನು ಹತ್ತಿರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಿದೆ

ಇ) ಹಾಲಿ ಮಾಸಿಕ ಸಂಭಾವನೆ ರೂ 600/– ನೀಡಲಾಗುತ್ತಿದೆ ಪೂರ್ವ ಪ್ರಾಥಮಿಕ ಶಾಲೆಗಳನ್ನು ರದ್ದುಗೊಳಿಸಿ ಅಲ್ಲಿದ್ದ ಆಯಾಗಳನ್ನು ಹತ್ತಿರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳಿಸಿದೆ ಈ ಹಿನ್ನಲೆಯಲ್ಲಿ ಆಯಾಗಳ ಸೇವೆ ಅಗತ್ಯವಿರುವುದಿಲ್ಲ ಆದರೂ ಸಹ ಮಾನವೀಯ ನೆಲೆಯಲ್ಲಿ ಅವರನ್ನು ಸಹಾ ಹತ್ತಿರದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನಿಯೋಜಿಸಲಾಗಿದೆ

ಆಯಾಗಳನ್ನು ನಿಯಮಾನುಸಾರ ನೇಮಕ ಮಾಡಿರುವುದಿಲ್ಲ ಇವರಿಗೆ ಕನಿಷ್ಟ ವಿದ್ಯಾರ್ಹತೆಯಾಗಲಿ ವಯೋಮಿತಿಯ ನಿರ್ಬಂಧವಾಗಲಿ ಇರುವುದಿಲ್ಲ ಆದ್ದರಿಂದ ಆಯಾಗಳ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ